ಎಂ.ವಿ.ಸಿ. ನಂ. 1160/2024
ಪಿಡಬ್ಲ್ಯೂ-1

(ಇಂದು ದಿನಾಂಕಃ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ RSK ವಕೀಲರಿಂದಃ**

ಮೃತ ಶಾಂತಮ್ಮ ನನ್ನ ಅಕ್ಕ. ಅಪಘಾತ ಆದ ದಿನ ಶಾಂತಮ್ಮ ಮತ್ತು ನನ್ನ ಅಣ್ಣ ವಿಜಯಕುಮಾರ ಮೋಟಾರ ಸೈಕಲ ಮೇಲೆ ರುಸ್ತಂಪೂರ ದಿಂದ ಸೇರಿಗೇರಿ ಬೆಟ್ಟಕ್ಕೆ ಹೋಗುತ್ತಿದ್ದರು. ಅಪಘಾತ ವಿಜಯಕುಮಾರ ಮೋಟಾರ ಸೈಕಲನ್ನು ವೇಗವಾಗಿ ವುತ್ತು ನಿಸ್ಕಾಳಜಿತನದಿಂದ ಚಾಲನೆ ಮಾಡಿದ್ದರಿಂದ ಮೋಟಾರ ಸೈಕಲ ಬಿದ್ದು ಆಗಿದೆ. ಅಪಘಾತ ದಿನಾಂಕ 31.01.2024 ರಂದು ಆಗಿದೆ. ದೂರನ್ನು 08-02-2024 ರಂದು, 8 ದಿನ ವಿಳಂಬವಾಗಿ ನೀಡಿದ್ದೇವೆ ಎಂದರೆ ಸರಿ. ಶಾಂತಮ್ಮ ವಿಜಯಕುಮಾರನ ಮೋಟಾರ ಸೈಕಲ ನಂಬರ KA 32 HF 6105 ರ ಮೇಲೆ ಕುಳಿತುಕೊಂಡು ಹೋಗುತ್ತಿರಲಿಲ್ಲ ಮತ್ತು ವಿಜಯಕುಮಾರನ ನಿಸ್ಕಾಳಜಿತನದ ಚಾಲನೆದಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ನಂತರ ಶಾಂತಮ್ಮನನ್ನು ಚಿಂಚೋಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ಅಲ್ಲಿಂದ ಕಲಬುರಗಿಯ ಕಾಮರೆಡ್ಡಿ ಆಸ್ಪತ್ರೆಗೆ ಹೋದೆವು. ಶಾಂತಮ್ಮ 20-25 ದಿನ ಒಳರೋಗಿಯಾಗಿದ್ದರು. ಶಾಂತಮ್ಮ ESI ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾರೆ. ಅಪಘಾತದ ನಂತರ ಶಾಂತಮ್ಮ ಚಿಕಿತ್ಸೆ ಪಡೆದು ಡಿಸ್ಚಾರ್ಜ ಆಗಿ ತಿಂಗಳ ನಂತರ ತೀರಿ ಹೋಗಿದ್ದಾರೆ ಎಂದರೆ ಸರಿ. ಶಾಂತಮ್ಮರವರ PM ಮಾಡಿಸಿಲ್ಲ ಎಂದರೆ ಸರಿ. ಅಪಘಾತದಿಂದ ಆದ ಗಾಯಗಳಿಂದಾಗಿ ಶಾಂತಮ್ಮ ತೀರಿ ಹೋಗಿದ್ದಾರೆ ಎಂದು ಸಂಬಂಧಪಟ್ಟ ಠಾಣೆಗೆ ಹೆಚ್ಚುವರಿ ದೂರು ನೀಡಿಲ್ಲ. ಶಾಂತಮ್ಮ ಅಪಘಾತದಿಂದ ಆದ ಗಾಯಗಳಿಂದಾಗಿ ಮರಣ ಹೊಂದಿಲ್ಲ. ಖಾಯಿಲೆಯಿಂದ ಮರಣ ಹೊಂದಿದ್ದಾಳೆ ಎಂದರೆ ಸರಿಯಲ್ಲ. ಶಾಂತಮ್ಮನ ಆಸ್ಪತ್ರೆ ಚಿಕಿತ್ಸೆಗೆ 12 ಲಕ್ಷ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಶಾಂತಮ್ಮ ತೀರಿ ಹೋದಾಗ 50 ರಿಂದ 55 ವರ್ಷ ವಯಸ್ಸು ಆಗಿತ್ತು. ಶಾಂತಮ್ಮ ಕೂಲಿ ಕೆಲಸ ಮಾಡುತ್ತಿದ್ದಳು. ಶಾಂತಮ್ಮರವರಿಗೆ 55 ಕ್ಕಿಂತ ಹೆಚ್ಚು ವಯಸ್ಸಾಗಿತ್ತು ಮತ್ತು ಅವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಶಾಂತಮ್ಮ ತಿಂಗಳಿಗೆ 30 ಸಾವಿರ ಸಂಪಾದನೆ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಬಾರಿ ESI ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿದ್ದರು ಎಂದರೆ ಸರಿ. ಅರ್ಜಿದಾರರು ಶಾಂತಮ್ಮನ ಆದಾಯದ ಮೇಲೆ ಅವಲಂಬಿತರು ಆಗಿರಲಿಲ್ಲ ಎಂದರೆ ಸರಿಯಲ್ಲ.

ಎಂ.ವಿ.ಸಿ. ನಂ. 1160/2024

ಪಿಡಬ್ಲ್ಯು-1

ಅರ್ಜಿದಾರರು ಮತ್ತು 1ನೇ ಎದುರುದಾರ ಸ್ವಂತ ಸಂಪಾದನೆ ಮಾಡುತ್ತಿದ್ದು, ಶಾಂತಮ್ಮನಿಂದ ಬೇರೆ ವಾಸ ಇದ್ದೆವು ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರಕ್ಕೆ ಆಧಾರ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.